ಸಂಬಂಧವಿಲ್ಲ. ಇದಕ್ಕೆಲ್ಲ ಒಂದಕ್ಕೊಂದು ಸಂಬಂಧ ಸೃಷ್ಟಿಸಿ ಸ್ತ್ರೀಯರನ್ನು ನೈತಿಕವಾಗಿ ನಿಯಂತ್ರಿಸಲು ಪ್ರಯತ್ನಿಸುತ್ತಿರುವುದು ವಿಕೃತಿಯೇ ಸರಿ.

## ದಾರಿ ಯಾವುದು?

ಸ್ತ್ರೀದ್ವೇಷಿ ಅಲ್ಲದವರು ಏನು ಮಾಡಬಹುದು? ಹೆಣ್ಣಿನ ಸಮಾನತೆಯ ವಿಷಯದಲ್ಲಿ ಈಗ ಕದನ ಏರ್ಪಟ್ಟಿರುವುದು ಹೆಣ್ಣು ಮತ್ತು ಗಂಡಿನ ನಡುವೆ ಅಲ್ಲ. ಉದ್ಯೋಗ ನಿರತ ಆಧುನಿಕ ಮಹಿಳೆಯರು ಮತ್ತು ಮನೆಯನ್ನು ಮಾತ್ರ ನಿರ್ವಹಿಸುವ ಸಾಂಪ್ರದಾಯಿಕ ಪಾತ್ರ ವಹಿಸುವ ಸ್ತ್ರೀಯರ ನಡುವಿನದೂ ಅಲ್ಲ ಈ ಕಲಹ. ಬದಲಿಗೆ ಇದು ಅಧಿಕಾರ ಸ್ಥಾಪಿಸಲು ಹೊರಟವರ ಮತ್ತು ಅಧೀನತೆಯನ್ನು ಒಪ್ಪದವರ ನಡುವಿನ ಸಮರ. ಅಧಿಕಾರ ಸ್ಥಾಪಿಸಲು ಹೊರಟವರು ಹೂಡುವ ಸಂಚೇ ಈ ಒಡೆದು ಆಳುವ ನೀತಿ. ಒಳ್ಳೆಯ ಹೆಂಗಸರನ್ನು 'ಆಧುನಿಕ' ಹೆಂಗಸರಿಂದ ಬೇರೆ ಮಾಡಿ, ಹೆಣ್ಣು ಹೇಗಿರಬೇಕು ಹೇಗಿರಬಾರದು ಎಂಬ ನೈತಿಕ ಪಾಠ ಹೇಳುತ್ತ ಇವರು ಮಾಡುತ್ತಿರುವುದು ಕೀಳು ರಾಜಕೀಯವೇ ಹೊರತು ಬೇರೇನಲ್ಲ.

ನಮ್ಮ ನಮ್ಮ ಮನೆಗಳಲ್ಲಿ, ಕಚೇರಿಗಳಲ್ಲಿ, ಚಹದಂಗಡಿ–ಪಾರ್ಕು–ರಸ್ತೆಗಳಲ್ಲಿ ಯಾರೇ ಹೆಂಗಸರ ಕುರಿತು ಕೀಳಾಗಿ ಮಾತನಾಡಿದಾಗ, ಹೆಣ್ಣನ್ನು ಕುರಿತು ಅನೈತಿಕ ಪೊಲೀಸ್‌ಗಿರಿ ಮಾಡಿದಾಗ ಅವರನ್ನು ಅಲ್ಲೇ ತಡೆದು, 'ಆ ಮಾತುಗಳಿಗೆ ನಮ್ಮ ಸಮ್ಮತಿಯಿಲ್ಲ' ಎಂದು ತಿಳಿ ಹೇಳುವುದು ಸ್ತ್ರೀ ದ್ವೇಷಿಗಳಲ್ಲದವರು ತೆಗೆದುಕೊಳ್ಳಬಹುದಾದ ಒಂದು ಕ್ರಮವಾಗಬಹುದೇನೋ. ದುಡಿಯುವ ಹೆಣ್ಣಿನ ಕುರಿತು ಯಾರಾದರೂ ಕೀಳು ಜೋಕು ಹಾರಿಸಿದಾಗ ಅವರಿಗೆ ಬೇಜಾರಾದೀತೆಂದು ನಗದೇ, ಮೌನವಾಗಿಯೂ ಉಳಿಯದೇ ಅವರಿಗೆ ಸೂಕ್ತ ಪ್ರತಿರೋಧ ವ್ಯಕ್ತಪಡಿಸುವುದೂ ಇನ್ನೊಂದು ಉಪಾಯ. ಎಂಥದೇ ಕ್ಷಣದಲ್ಲೂ ನಾವು ಯಾವುದರ ಪರ ಎಂಬ ಪ್ರಜ್ಞೆ ಸುಪ್ತವಾಗಿ ನಮಗೇ ಗೊತ್ತಿದ್ದರೆ ಸ್ತ್ರೀದ್ವೇಷಿಗಳನ್ನು ಬಗ್ಗುಬಡಿಯುವುದು ಸುಲಭವಾದೀತು.



## ಮುಂದಿನ ದಿಕ್ಕೇನು?

ಕೊನೆಗೂ ನಾವು ಮಾಡಬಹುದಾಗಿದ್ದು ಏನನ್ನು? ಹೆಣ್ಣಿರಲಿ, ಗಂಡಿರಲಿ, ಆ ನಡುವಿನವರಿರಲಿ ಅಥವಾ ಎರಡಕ್ಕೂ ಸೇರದ ಭಿನ್ನ ಲಿಂಗದವರಿರಲಿ, ಅವರವರ ದೇಹ ಅವರವರದೇ ಸ್ವತ್ತು ಎಂಬ ಸತ್ಯವನ್ನು ನಾವು ಮನವರಿಕೆ ಮಾಡಿಕೊಳ್ಳಬೇಕಿದೆ. ಹೆಂಗಸರು ಯಾವಾಗ ಮದುವೆಯಾಗಬೇಕು, ಮಕ್ಕಳನ್ನು ಹಡೆಯಬೇಕೋ ಬಾರದೋ, ಅದಕ್ಕೆ ಮದುವೆಯ ಮೊಹರು ಬೇಕೇ ಬೇಡವೇ ಎಂಬೆಲ್ಲ ನಿರ್ಧಾರಗಳನ್ನು ಹೆಂಗಸರೇ ತೆಗೆದುಕೊಳ್ಳಲಿ. ಅದಕ್ಕೆ ಬೇಕಿರುವ ತಿಳಿವಳಿಕೆ, ಜ್ಞಾನ, ಸ್ಥೈರ್ಯ ಎಲ್ಲ ಕಾಲದಲ್ಲೂ ಹೆಣ್ಣಿಗೆ ಇದ್ದೇ ಇದೆ. ಅವರ ಹಕ್ಕುಗಳನ್ನು ಕಸಿದಿಟ್ಟುಕೊಳ್ಳುವ ಯೋಗ್ಯತೆ ಸಂಸ್ಕೃತಿ ರಕ್ಷಕರೆಂಬ ಬಾಯಿಬಡುಕರಿಗೆ ಖಂಡಿತ ಇಲ್ಲ. ಯಾರ ಮಾತನ್ನೂ ಒಪ್ಪಿಗೆಯಿಲ್ಲದೇ ನಾವು ನಡೆಸಬೇಕಿಲ್ಲ. ನಮ್ಮಿಂದ ಸಮಾಜವೇ ಹೊರತು ಸಮಾಜಕ್ಕಾಗಿ ನಾವು ಬದಲಾಗಬೇಕಿಲ್ಲ.

ಸ್ತ್ರೀಯರು 'ವರ್ಕ್ ಫೋರ್ಸ್' ಸೇರಿ ಬಹಳ ವರ್ಷಗಳೇನೂ ಆಗಿಲ್ಲ. ಕಳೆದ ನಲವತ್ತರಿಂದ ಐವತ್ತು ವರ್ಷಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಗಳಲ್ಲಿ ಕೆಲಸಕ್ಕೆ ಸೇರಿ ಮಿಕ್ಕೆಲ್ಲ ಕೌಟುಂಬಿಕ ಜವಾಬ್ದಾರಿಗಳ ಜೊತೆಗೆ ಆರ್ಥಿಕವಾಗಿಯೂ ಕುಟುಂಬ ನಿರ್ವಹಣೆಗೆ ನೊಗ ಹೊತ್ತುಕೊಳ್ಳುತ್ತಿದ್ದಾರೆ. ಅವರ ಹೆಗಲ ಭಾರವನ್ನು ಚೂರು ಚೂರೇ ಹೇಗೆ ಕಡಿಮೆ ಮಾಡಬಹುದು ಎಂಬ ಬಗ್ಗೆ ಮುಕ್ತವಾಗಿ ಚರ್ಚಿಸೋಣ. ಹಾದು ಬಂದ ದಾರಿ ಮಹತ್ವದ್ದೇ ಆದರೂ ಮುಂದೆ ನಡೆಯಬೇಕಾದ ಪಥವೇ ದೊಡ್ಡದಿದೆ.

ಈಗ ನಾವು ಯೋಚಿಸಬೇಕಾದುದು ಎಷ್ಟೋ ವರ್ಷಗಳಿಂದ ಗಂಡಸರ ಜಾಗ ಮಾತ್ರವಾಗಿದ್ದ ಉದ್ಯೋಗ ಕ್ಷೇತ್ರವನ್ನು ಹೆಣ್ಣಿನ ಅವಶ್ಯಕತೆಗೆ ತಕ್ಕಂತೆ ಹೇಗೆ ಬದಲಿಸಿಕೊಳ್ಳಬಹುದು ಎಂಬ ಬಗ್ಗೆ. ಹೆಚ್ಚು ಹೆಚ್ಚು ಹೆಂಗಸರು ಆರ್ಥಿಕವಾಗಿ, ಸಾಮಾಜಿಕವಾಗಿ ಸ್ವಾತಂತ್ರ್ಯ ಕಂಡುಕೊಳ್ಳುವುದು, ಸ್ತ್ರೀಯರನ್ನು ಹೆಂಡತಿ, ತಾಯಿಯಾಗಲ್ಲದೇ ಬೇರೆ ಹೇಗೋ ನೋಡಲು ಸಾಧ್ಯವಾಗದಿದ್ದವರಿಗೆ ಸಮರ್ಪಕ ಪ್ರತಿವಾದವಾದೀತು.

ಜೊತೆಗೆ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ತಿಳಿವಳಿಕೆ ಹೊಂದುವುದು, ರಾಜಕೀಯದಲ್ಲಿ ಭಾಗವಹಿಸುವುದು ಮತ್ತು ಸ್ತ್ರೀದ್ವೇಷವನ್ನು ಸಮರ್ಥಿಸಿಕೊಳ್ಳುವ ವಿತಂಡವಾದಿಗಳನ್ನು ಚುನಾವಣೆಗಳಲ್ಲಿ ಆರಿಸಿ ಕಳಿಸುವುದನ್ನು ನಿಲ್ಲಿಸುವುದು ಕೂಡ ಇದನ್ನೆಲ್ಲ ತಡೆಯುವ ಇನ್ನೊಂದು ಮಾರ್ಗವಾಗಬಹುದೇನೋ. ಆಗಲಾದರೂ ಹೆಣ್ಣನ್ನು ಒಂದು ಗರ್ಭವಾಗಿಯಷ್ಟೇ ನೋಡುವ ಮನಸ್ಥಿತಿ ನಿಧಾನವಾಗಿಯಾದರೂ ಬದಲಾದೀತೇನೋ ಅಂತ ದೂರದ ಆಸೆ.

ಪ್ರತಿಕ್ರಿಯಿಸಿ: feedback@sudha.co.in